# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

ಎಸ್.ಸಿ. 45/2021

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಗಿರೀಶ.ಬಿ.ಎಂ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಲೇ.ಮಹದೇವಪ್ಪ | | **14.03.2024** |
| **ವಯಸ್ಸು** | ಃ **38** **ವರ್ಷ** | | |
| **ವೃತ್ತಿ** | ಃ ಚಾಲಕ | | **ಪ್ರಾ.ಸಾ. ಃ 23** |
| **ವಾಸಸ್ಥಳ** | ಃ ಭುಗತಹಳ್ಳಿ, ಮೈಸೂರು | | **ಚಾ.ಸಾ. ಃ 21** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಕೆಎ-*55*-ಎ-*0382* ವಾಹನವನ್ನು ಓಡಿಸುತ್ತೇನೆ. ಈ ಮೊದಲು *2016* ರಲ್ಲಿ ಒಂದು ಟಾಟಾ ಎಎಸ್ ವಾಹನವನ್ನು ಖರೀದಿ ಮಾಡಿದ್ದು ಅದರ ಸಂಖ್ಯೆ ಕೆಎ-*55*-*6760* ಇರುತ್ತದೆ. ಆ ವಾಹನವನ್ನು ನಾನು ಸಾಲದ ಆಧಾರದ ಮೇಲೆ ಖರೀದಿ ಮಾಡಿದ್ದೆ. *2018* ರಲ್ಲಿ ನಾನು ಆ ವಾಹನವನ್ನು ನಮ್ಮ ಗ್ರಾಮದ ನಾಗೇಶ ಎನ್ನುವವರಿಗೆ ಮಾರಾಟ ಮಾಡಿದ್ದೆ. ಕೋರ್ಟ್ ಮುಂದೆ ಇರುವ *1* ನೇ ಆರೋಪಿತ ನಾಗೇಶ ನನ್ನ ವಾಹನವನ್ನು ಖರೀದಿ ಮಾಡಿದ ನಾಗೇಶ ಇರುತ್ತಾನೆ. ಆ ಕಾಲಕ್ಕೆ ನನ್ನ ವಾಹನದ ಮೇಲೆ ಸಾಲ ಇದುದ್ದರಿಂದ ಆ ವಾಹನದ ದಾಖಲೆಗಳನ್ನು *1* ನೇ ಆರೋಪಿತನ ಹೆಸರಿಗೆ ವರ್ಗಾಯಿಸಲು ಆಗುವುದಿಲ್ಲ ಎನ್ನುವ ಕಾರಣಕ್ಕೆ ಅದನ್ನು ಮಾರಿದ ಬಗ್ಗೆ ನೋಟರಿ ಅವರ ಬಳಿ ಒಂದು ದಾಖಲೆ ಮಾಡಿಕೊಂಡಿದ್ದೇವೆ. ಈಗ ನಾನು ನೋಡುತ್ತಿರುವ ದಾಖಲೆ ಅದೇ ಇರುತ್ತದೆ. ಸದರಿ ದಾಖಲೆಯನ್ನು ನಿ.ಪಿ-*78* ಎಂದು ಗುರುತಿಸಿದೆ. ನಿ.ಪಿ-*78* ರಲ್ಲಿನ ಈಗ ನಾನು ನೋಡುತ್ತಿರುವ ಸಹಿಗಳು ನನ್ನ ಸಹಿ ಮತ್ತು ನಾಗೇಶನ ಸಹಿಗಳು ಇರುತ್ತವೆ. ಸದರಿ ಸಹಿಗಳನ್ನು ಅನುಕ್ರಮವಾಗಿ ನಿ.ಪಿ-*78(ಎ)* ಮತ್ತು *(ಬಿ)*

ಎಂದು ಗುರುತಿಸಿದೆ. ನಂತರ ಪತ್ರಿಕೆಗಳಲ್ಲಿ ನೋಡಿದಾಗ ನಾಗೇಶ, ನಿರಂಜನ ಮತ್ತು ಇತರರು ಸೇರಿ ಯಾರದ್ದೊ ಕೊಲೆ ಮಾಡಿದ್ದಾರೆ ಎಂದು ಗೊತ್ತಾಗಿತ್ತು. ನಾನು *1* ನೇ ಆರೋಪಿತನಿಗೆ ಮಾರಾಟ ಮಾಡಿದ್ದ ವಾಹನ ಈಗಲೂ ನನ್ನ ಹೆಸರಿನಲ್ಲಿದೆ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ನನ್ನ ಹೇಳಿಕೆ ಪಡೆಯುವ ಕಾಲಕ್ಕೆ ನನಗೆ ನೋಟಿಸ್ ಕೊಟ್ಟಿದ್ದಾರೆ. ಈಗ ನಾನು ನೋಡುತ್ತಿರುವ ನೋಟಿಸ್ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ನೋಟಿಸ್ ಅನ್ನು ನಿ.ಪಿ-*79* ಮತ್ತು ಸಹಿಯನ್ನು ನಿ.ಪಿ-*79(ಎ)* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ನಿ.ಪಿ-*49* ರಿಂದ *53* ಪೊಟೋಗಳಲ್ಲಿರುವ ವಾಹನ ನಾನು *1* ನೇ ಆರೋಪಿತನಿಗೆ ಮಾರಾಟ ಮಾಡಿದ್ದ ವಾಹನ ಇದೆ.

<u>ಪಾಟೀ ಸವಾಲು : 1 ರಿಂದ 5 ನೇ ಆರೋಪಿ ಪರ ವಕೀಲರವರಿಂದಃ-</u> ಇಲ್ಲ

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***